S9005 – ವಿ-330 –

ಮಾನ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರುಗಳಾದ ಶ್ರೀ ಎಸ್.ಆರ್.ಪಾಟೀಲ್ ಮತ್ತು ಇತರೆ ಸದಸ್ಯರುಗಳು ನಿಯಮ 59 ರಡಿಯಲ್ಲಿ ನೀಡಿರುವ ನಿಲುವಳಿ ಸೂಚನೆಗೆ ಮಾನ್ಯ ಮುಖ್ಯಮಂತ್ರಿರವರ ಹೇಳಿಕೆ

**ವಿಷಯ:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿಯಲ್ಲಿ ವಸತಿ ಸಮುಚ್ಚಯ ನಿರ್ಮಾಣ ಮಾಡಲಿರುವ ಸುಮಾರು ರೂ.666.22 ಕೋಟಿ ಮೊತ್ತದ ಕಾಮಗಾರಿಗಳಲ್ಲಿ ಭಾರೀ ಅವ್ಯವಹಾರವು ನಡೆದಿದ್ದು, ಈ ಸಂಬಂಧ ಗುತ್ತಿಗೆದಾರರ ಬಳಿ ನಡೆಸಿದ ಸಂಭಾಷಣೆಗಳು ಹಾಗೂ ಅನೇಕ ದಾಖಲಾತಿಗಳಿಂದ ಸ್ಪಷ್ಟವಾಗಿ ಕಂಡುಬಂದಿದ್ದು, ಇದರಲ್ಲಿ ಭಾರೀ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದುದರಿಂದ ಈ ರೀತಿಯಾಗಿ ಸಾರ್ವಜನಿಕರ ಹಣವು ಲಂಚಕ್ಕಾಗಿ ಪೋಲಾಗುತ್ತಿರುವ ಬಗ್ಗೆ.

******

**ಉತ್ತರ :**

ಕೋಣದಾಸಪುರ, ಹಂತ–1 ರಲ್ಲಿ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿಗಾಗಿ ಟೆಂಡರ್ ಅಧಿಸೂಚನೆ ಸಂಖ್ಯೆ: BDA/EE/HPD-1/TEN-186/2017-18 ದಿನಾಂಕ:11.10.2017ರಂದು 567.00 ಕೋಟಿ ಮೊತ್ತಕ್ಕೆ ಟೆಂಡರ್ ಪ್ರಕಟಣೆ ಹೊರಡಿಸಲಾಯಿತು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಈ ಕೆಳಕಂಡ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ.

1. ಮೇ॥ ರಾಮಲಿಂಗಮ್‌ಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್
2. ಮೇ॥ ನಾಗಾರ್ಜನಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್

ತಾಂತ್ರಿಕವಾಗಿ ಅರ್ಹತೆ ಪಡೆದಿರುವ ಮೇಲ್ಕಂಡ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ತೆರೆಯಲಾಯಿತು. ಸದರಿ ಗುತ್ತಿಗೆದಾರರು ಈ ಕೆಳಕಂಡಂತೆ ಆರ್ಥಿಕ ಬಿಡ್ ಸಲ್ಲಿಸಿರುತ್ತಾರೆ.

1. **ಮೇ॥ ರಾಮಲಿಂಗಮ್‌ಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್ : ರೂ.675.00 ಕೋಟಿ (19.04% ಹೆಚ್ಚುವರಿ)**
2. **ಮೇ॥ ನಾಗಾರ್ಜನಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್ : ರೂ.691.74 ಕೋಟಿ (22.00 % ಹೆಚ್ಚುವರಿ)**

ಆರ್ಥಿಕ ಬಿಡ್‌ನಲ್ಲಿ ಕಡಿಮೆ ದರ ನಮೂದಿಸಿದ್ದ, ಗುತ್ತಿಗೆದಾರರಾದ ಮೇ॥ ರಾಮಲಿಂಗಮ್ ಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್‌ರವರನ್ನು ದಿನಾಂಕ: 18.12.2017 ರಂದು ದರ ಸಂಧಾನಕ್ಕೆ ಆಹ್ವಾನಿಸಲಾಯಿತು. ಸಂಧಾನ ನಂತರ ಗುತ್ತಿಗೆದಾರರು ತಾವು ಟೆಂಡರ್‌ನಲ್ಲಿ ನಮೂದಿಸಿದ್ದ, 19.04% ಹೆಚ್ಚುವರಿ ದರಗಳನ್ನು ಕಡಿಮೆ ಮಾಡಿ ರೂ.666.23 ಕೋಟಿಗಳಿಗೆ (17.50% ಹೆಚ್ಚುವರಿ) ತಮ್ಮ ಒಪ್ಪಿಗೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 22.04.2019 ರಂದು ಗುತ್ತಿಗೆದಾರರಿಗೆ Letter of Acceptance ನೀಡಲಾಗಿದ್ದು, ದಿನಾಂಕ: 24.06.2019 ರಂದು ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಂಡು ದಿನಾಂಕ: 24.06.2019 ರಂದು ಕಾರ್ಯಾದೇಶ ಹೊರಡಿಸಲಾಗಿದ್ದು, ಆದರೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳದಿರಲು ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿದ್ದರೂ ಸಹ ಮತ್ತೆ ಮುಂದುವರೆಸುವ ಕ್ರಮ ಕೈಗೊಂಡಿದ್ದು, ಸದರಿ ಕಾಮಗಾರಿಯು ಪ್ರಾಥಮಿಕ ಹಂತದ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಗಾಗಿ ಈವರೆಗೆ ಯಾವುದೇ ಹಣ ಪಾವತಿಸಿರುವುದಿಲ್ಲ.

---

ಸಂಖ್ಯೆ:ನಅಇ 68 ಬೆಂಭೂಸ್ವಾ 2020.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ